ಬೆಂಗಳೂರು	೪೧,೬೨,೫೦೧	೫೪.೪೭,೮೫೩	೪೫,೨೦,೨೫೨
ಮೈಸೂರು	೨೩,೬೨,೯೨೧	೬೨,೬೭,೧೨೦	೫೯,೩೭,೪೨೫
ಕರ್ನಾಟಕ	೩೨,೬೫,೮೫೮	೩೮,೪೨,೭೯೮	೩೬,೨೦,೨೨೮
ಮಂಗಳೂರು	—	೩,೦೦೦	೩,೫೦೦
ಗುಲ್ಬರ್ಗಾ	—	—	—
ಒಟ್ಟು	೯೭,೯೧,೨೭೫	೧,೫೫,೬೦ ೭೧೬	೧,೨೦,೮೧,೪೦೫

ಮೈಸೂರು ವಿಶ್ವವಿದ್ಯಾನಿಲಯ

೧. ಪ್ರಾದೇಶಿಕ ಭಾಷೆಗಳಲ್ಲಿ ಪಠ್ಯ ಪುಸ್ತಕ ಪ್ರಕಟಣೆ ಯೋಜನೆ.

೨. ಎಪಿ ಗ್ರಾಫಿಯಾ ಕರ್ನಾಟಕ ಯೋಜನೆಯ ಪರಿಷ್ಕರಣ ಮತ್ತು ಪುನರ್ ಮುದ್ರಣದ ಬಗ್ಗೆ

೩. ಕನ್ನಡ ವಿಶ್ವಕೋಶ ಮತ್ತು ವಿಷಯ ವಿಶ್ವಕೋಶ.

ಗುಲ್ಬರ್ಗಾ ವಿಶ್ವವಿದ್ಯಾಲಯ

೧. ಗ್ರಂಥಾಲಯಕ್ಕಾಗಿ ಪುಸ್ತಕ ಖರೀದಿ.

೨. ಕಟ್ಟಡಗಳ ನಿರ್ಮಾಣ.

೩. ವೈಜ್ಞಾನಿಕ ವಿಭಾಗಗಳಿಗಾಗಿ ವೈಜ್ಞಾನಿಕ ಉಪಕರಣಗಳನ್ನು ಖರೀದಿಸುವುದು.

೪. ಫೆಲೋಷಿಪ್ ಸಂಯೋಧನ ವಿದ್ಯಾರ್ಥಿ ವೇತನ.

೫. ಆಟದ ಮೈದಾನ ಅಭಿವೃದ್ಧಿ.

೬. ಪ್ರಕಾಶನದ ಚಟುವಟಿಕೆಗಳು.

೭. ಪಿಠೋಪಕರಣಗಳ ಅಭಿವೃದ್ಧಿ. ಬೆಂಗಳೂರು, ಕರ್ನಾಟಕ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ವಿಳಂಬವಾಗಿರುವ ಯೋಜನೆಗಳು ಇಲ್ಲ.

ಕೊಣ್ಣೂರು ಯಾತ ನೀರಾವರಿ

೭೭೦. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).— ಮಾನ್ಯ ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಣ್ಣೂರ ಯಾತ ನೀರಾವರಿ ಕೆಲಸ ಪೂರ್ತಿಗೊಂಡಿದೆಯೇ ?

ಆ) ಈ ಕೆಲಸ ಪೂರ್ಣಗೊಳಿಸಲು ತಗಲುವ ಅಂದಾಜು ಹಣವೆಷ್ಟು ?

ಇ) ಈ ನೀರಾವರಿಯಿಂದ ಎಷ್ಟು ಎಕರೆ ನೀರಾವರಿಯಾಗಿದೆ ?

ಶ್ರೀ ಕೆ. ಕೃಷ್ಣಮೂರ್ತಿ (ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು).—

ಅ) ಪೂರ್ತಿಯಾಗಿಲ್ಲ.

ಆ) ಬಾಕಿ ೮ ಲಕ್ಷ ರೂ.ಗಳು.

ಇ) ೬೧೫ ಎಕರೆ (೨೪೯ ಹೆಕ್ಟೇರ್)